# ಅಂತಃಕರಣದ ಕತೆಗಳು

ಕನ್ನಡ ಕಥಾಸಾಹಿತ್ಯದ ವೈವಿಧ್ಯವನ್ನು ತೋರುವ ಕತೆಗಳನ್ನು ಈ ಸಂಚಿಕೆ ಒಳಗೊಂಡಿದೆ. ಕಳೆದ ನೂರು ವರ್ಷಗಳಲ್ಲಿ ಕನ್ನಡದ ಕತೆಗಳು ತಮ್ಮ ಬೆಳವಣಿಗೆಯಲ್ಲಿ ಪಡೆದುಕೊಂಡ ವೇಗ, ತಳೆದ ರೂಪ ಅಸಾಧಾರಣ ಮತ್ತು ಅಗಾಧವಾದದ್ದು. ಈಗಾಗಲೇ ಕನ್ನಡದಲ್ಲಿ ಹಲವು ಬಗೆಯ ವಸ್ತು, ನಿರೂಪಣೆಯ ಕತೆಗಳು ಬಂದಿವೆ. ಈ ದಿಸೆಯಲ್ಲಿ 'ಮಯೂರ'ವೂ ಕನ್ನಡ ಕಥಾಸಾಹಿತ್ಯಕ್ಕೆ ತನ್ನದೇ ಕೊಡುಗೆಯನ್ನು ಕೊಟ್ಟಿದೆ. ಪ್ರಸ್ತುತ ಸಂಚಿಕೆಯಲ್ಲಿ ಅಚ್ಚಾಗಿರುವ 'ಹುಗ್ಗಿ' ಕತೆ ಸಾವು–ಬದುಕಿನ, ಸ್ವಾಭಿಮಾನ–ಜಿದ್ದಿನ ಸುತ್ತ ಇದ್ದರೆ, 'ಭಾಯಿ ಭಾಯಿ' ಕತೆ ದೇಶಗಳ ನಡುವಿನ ವೈರತ್ವವನ್ನು ಬೇರೆ ದೇಶದಲ್ಲಿ, ಭಿನ್ನ ಸನ್ನಿವೇಶದಲ್ಲಿ ಪರಿಶೀಲಿಸುತ್ತದೆ. 'ಶಿಲುಬೆ ಮಲೆ' ಕತೆ ಧರ್ಮದ ಬಲೆಯಲ್ಲಿ ಸಿಕ್ಕಿಬಿದ್ದಿರುವ ಮನುಷ್ಯ ಎದುರಿಸಬೇಕಾದ ಕೇಡನ್ನು, ಬದುಕಿನೊಂದಿಗೆ ಹೆಣೆದುಕೊಂಡಿರುವ ಅವನ ಪತನವನ್ನು ಹೇಳಿದರೆ, 'ನಿಲ್ಲು ನಿಲ್ಲೇಲೆ ನವಿಲೆ' ಮತ್ತು 'ಕೂಡಿಕೆ' ಕತೆಗಳು ಹೆಣ್ಣಿನ ನೋವಿನ, ಸ್ವಭಾವದ ಹಲವು ಆಯಾಮಗಳನ್ನು ಚಿತ್ರಿಸುತ್ತವೆ. 'ಅಕ್ಕಿಕಾಳು' ಕತೆ ಎದುರಾಗುವ ಸನ್ನಿವೇಶಗಳಿಗೆ ಮನುಷ್ಯ ಹೊಂದಿಕೊಂಡು ಬದುಕಬೇಕಾದ ಅನಿವಾರ್ಯತೆಯನ್ನು ನಿರೂಪಿಸಿದೆ. ಈ ಎಲ್ಲ ಕತೆಗಳೂ ಮನುಷ್ಯನ ವೇದನೆಯನ್ನು ಹಲವು ಬಗೆಗಳಲ್ಲಿ ದಾಖಲಿಸುತ್ತವೆ. ಜೊತೆಗೆ, ಸಹಾನುಭೂತಿಯಿಂದ, ಪ್ರೀತಿಯಿಂದ ಬದುಕನ್ನು ನೋಡುವುದು ಇವುಗಳ ಸ್ಥಾಯಿ ಗುಣವಾಗಿದೆ. ಬದುಕಿನ ಕುರಿತು ಮೇರೆ ಇಲ್ಲದ ಮೋಹ ಇಲ್ಲದಿದ್ದರೆ ಈ ಬಗೆಯ ಅಂತಃಕರಣದ ಕತೆಗಳನ್ನು ಹೇಳಲು ಕತೆಗಾರರಿಗೆ ಸಾಧ್ಯವಾಗುವುದಿಲ್ಲ. ಹೀಗಾಗಿ, ಈ ಸಂಚಿಕೆಯ ಕತೆಗಳು ಓದುಗರನ್ನು ತಮ್ಮತ್ತ ಆಕರ್ಷಿಸುವ ಗುಣವನ್ನು ಸಹಜವಾಗಿಯೇ ಹೊಂದಿವೆ ಹಾಗೂ ಕನ್ನಡ ಕಥಾಸಾಹಿತ್ಯ ಸಾಗುತ್ತಿರುವ ದಿಕ್ಕನ್ನು ಕೂಡ ಸೂಚಿಸುತ್ತವೆ.



ಚಿತ್ರ: ಪ್ರದೀಪಕುಮಾರ್ ಡಿ.ಎಂ.

ಪುಸ್ತಕಗಳು ಸಂಸ್ಕೃತಿಯೊಂದರ ಪ್ರಮುಖ ಭಾಗ. ಅವುಗಳ ಕುರಿತ ವಿಮರ್ಶೆ ಭಾಷೆಯೊಂದರ ಜೀವಂತಿಕೆಯನ್ನು ತೋರುತ್ತದೆ. 'ನನ್ನ ಓದು' ಅಂಕಣದಲ್ಲಿ ಈ ಬಾರಿ ಲೇಖಕಿಯರಾದ ನೇಮಿಚಂದ್ರ ಮತ್ತು ಎಂ.ಎಸ್. ಆಶಾದೇವಿ ಅವರ ವಿಮರ್ಶೆಗಳಿವೆ. ಅವು ಕನ್ನಡದ ಎರಡು ಮುಖ್ಯ ಪುಸ್ತಕಗಳ ಮಹತ್ವದ ಕುರಿತಂತೆ ಓದುಗರ ಗಮನ ಸೆಳೆಯುತ್ತವೆ.

ಈ ಬಾರಿಯ ಸಾಹಿತ್ಯದ ನೊಬೆಲ್ ಪ್ರಶಸ್ತಿ ತಾಂಜೇನಿಯಾ ಮೂಲದ ಲೇಖಕ ಅಬ್ದುಲ್‌ರಜಾಕ್ ಗುರ್ನಾ ಅವರಿಗೆ ಬಂದಿದೆ. ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಗುರ್ನಾ ಕಾದಂಬರಿಕಾರ ಮತ್ತು ಕತೆಗಾರ. ಈ ಸಂಚಿಕೆಯಲ್ಲಿ ಎಸ್. ದಿವಾಕರ್ ಅವರು ಅನುವಾದಿಸಿರುವ ಗುರ್ನಾ ಅವರ 'ಪಂಜರಗಳು' ಕತೆ, ನೊಬೆಲ್ ಪ್ರಶಸ್ತಿ ವಿಜೇತ ಲೇಖಕನೊಬ್ಬನ ಬರವಣಿಗೆಯ ಪುಟ್ಟ ಪರಿಚಯವನ್ನು ಓದುಗರಿಗೆ ಮಾಡಿಕೊಡಬಲ್ಲದು.

ಇದು ಈ ವರ್ಷದ ಕೊನೆಯ ಸಂಚಿಕೆ. ಪ್ರತಿ ಕೊನೆಯೂ ಹೊಸದರ ಆರಂಭಬಿಂದು. ಈ ಸಂಚಿಕೆಯ ಹೊಸ ಧಾಟಿಯ ಬರಹಗಳು ಓದುಗರನ್ನು ಮರುಳುಗೊಳಿಸುವ ಬರವಣಿಗೆಯ ಮಾಯಾಲೋಕಕ್ಕೆ ದಾರಿ ಮಾಡಿಕೊಡಲಿ, ಅವುಗಳ ಓದು ಬದುಕಿನ ರುಚಿ–ಆನಂದವನ್ನು ಹೆಚ್ಚಿಸಲಿ ಎಂದು ಆಶಿಸುತ್ತೇವೆ.

**ಮಯೂರ ಬಳಗ**